ಹ್ಯಾಬಿಟ್ಟನ್ನು ಕಂಟಿನ್ಯೂ ಮಾಡಿಕೊಂಡು ಬಂದಿದ್ದ. ಇವನ ಇಂಥ ಪ್ರಾಕ್ಟೀಸು ಇಡೀ ಊರಿಗೇ ಗೊತ್ತಿದ್ದರಿಂದ ಮಂಜಣ್ಣನನ್ನು ಊರಿನ ಸಕಲ ನರಜಂತುಗಳೇ ಅಲ್ಲದೆ ಸ್ವತಃ ಹುಟ್ಟಿಸಿದ ಅಪ್ಪಅಮ್ಮ ಕೂಡಾ ತಂಗ್ಳು, ತಂಗ್ಳ, ತಂಗ್ಳೋನೆ ಎಂಬ ನಾಮಾಂಕಿತವನ್ನೆ ಭಜಿಸುತ್ತಿದ್ದರು. ತಂಗ್ಳನಿಗೀಗ ಇಪ್ಪತ್ತಾರು ದಾಟಿದ್ದರೂ ಅಪ್ಪ ಅಮ್ಮನ ಮಾತನ್ನು ಅಗ್ರೀಸ್ ದಾಟೋದಿಲ್ಲ. ಅವನಾಯ್ತು, ಅವನ ಬೇಸಾಯ ಆಯ್ತು. ಇವೊತ್ತಿಗೂ ಒಂದು ಬೀಡಿ ಸಿಗರೇಟು ಮುಟ್ಟೋನಲ್ಲ. ಏನಾದ್ರೂ ಕೆಲಸದ ಮೇಲೆ ಬ್ಯಾಲ್ಯಕ್ಕೊ, ಮಧುಗಿರಿಗೊ ಹೋದ್ರೆ ಹೋಟೆಲ್ಗೆ ನುಗ್ಗಿ ಕಾಯಶ್ಯಿನಿಂದ ಮಸಾಲೆ ದೋಸೆ ತಿಂದು ಕಾಫಿ ಕುಡಿತಾನೆ. ಊರಿನಲ್ಲಿ ಯಾರಾದರೂ ಪೋಲಿ ಬಿದ್ದರೆ, ಅಂಥೋರಿಗೆ ಅವರ ಅಪ್ಪ ಅಮ್ಮಂದಿರು, ‘‘ಹೋಗಿ ಆ ತಂಗ್ಳನ ಕಾಲ್ ಕೆಳ್ಗೆ ದಿನಾ ಒಂದಪ ತೂರಿ ಬರ್ರಿ ಆಗ್ಲಾದ್ರೂ ಬುದ್ಧಿ ಬರ್ತೈತೆ.’’ ಎಂದು ಬುದ್ಧಿವಾದ ಹೇಳುತ್ತಿದ್ದರು.

ಇಂಥ ತಂಗ್ಳನಿಗೆ ಇವೊತ್ತು ಸೂರ್ಯ ಪರಮಾತ್ಮನು ಹುಟ್ಟಿ ಎರಡು ಮೂರು ಬಾರು ಮೇಲೇರಿದ್ದರೂ ಎಚ್ಚರವಾಗಿರಲಿಲ್ಲ. ಅದಕ್ಕೆ ಅಂಥ ಬಲವಾದ ಕಾರಣವೇನೂ ಇರಲಿಲ್ಲ. ಮಧುಗಿರಿ ಶಂಕರ್ ಟಾಕೀಸಿನಲ್ಲಿ ಪ್ರಿನ್ಸ್ ಮಹೇಶ್ ಬಾಬುವಿನ ‘ಶ್ರೀಮಂತುಡು’ ಸಿನಿಮಾ ಹಾಕಿ ವಾರದ ಮೇಲಾಗಿತ್ತು. ತಂಗ್ಳನು ಪ್ರಿನ್ಸ್ ಮಹೇಶ್ ಬಾಬುವಿನ ಪರಮ ಭಕ್ತನಾಗಿದ್ದನಲ್ಲದೆ ಅವನೊಬ್ಬನ ಸಿನಿಮಾ ಮಾತ್ರ ನೋಡುತ್ತಿದ್ದ. ಹಾಗಾಗಿ ನಿನ್ನೆ ರಾತ್ರಿ ಹಿಟ್ಟುಂಡು ಸುವೇಗಾದಲ್ಲಿ ಹತ್ತು ಮೈಲಿ ದೂರದ ಮಧುಗಿರಿಗೆ ಸೆಕೆಂಡ್ ಶೋ ಸಿನಿಮಾಗೆ ಹೊರಟೇ ಬಿಟ್ಟ. ಸಿನಿಮಾ ಬೊಂಬಾಟಾಗಿತ್ತು. ಖುಷಿಯಲ್ಲಿ ಸುವೇಗಾ ಸ್ಟಾರ್ಟ್ ಮಾಡಲು ಹೋದವನಿಗೆ ಎರಡೂ ಚಕ್ರಗಳು ಪಂಚರ್ ಆಗಿರುವುದು ಕಂಡು ಬಂದಿತ್ತು. ಮ್ಯಾನೇಜರನ ಕರೆದು ತರಾಟೆಗೆ ತೆಗೆದುಕೊಂಡಿದ್ದ. ಮ್ಯಾನೇಜರ್, ‘‘ಬಿಟ್ಟೋಗಿ ಸಾ, ನಾಳೆ ಒಂಬತ್ತು ಗಂಟೆಗೆ ಬರ್ರಿ, ಪಂಚರ್ ಹಾಕ್ಸಿರ್ತೀನಿ. ಯಾವ್ನೋನೊ ಮತಿಗೆಟ್ಟನ್ಮಗ ಮಾಡಿರೊ ಕೆಲ್ಸಕ್ಕೆ ನಾವ್ ಮಕ್ಕುಗಿಸ್ಕೊಬೇಕು ನೋಡ್ರಿ.’’ ಎಂದು ಮ್ಯಾನೇಜರ್ ತನ್ನ ಮುಖಕ್ಕೆ ತಾನೇ ಉಗಿದುಕೊಂಡಿದ್ದ. ಸರಿ, ಸುವೇಗಾವನ್ನು ಬೆಳಗ್ಗೆ ಬಸ್ಸಿನಲ್ಲಿ ಬಂದು ತಗೊಂಡು ಹೋದರಾಯಿತೆಂದುಕೊಂಡು ತಂಗ್ಳನು ಅದರ ಬೀಗದ ಕೈಯ್ಯನ್ನು ಮ್ಯಾನೇಜರ್ ಕೈಗಿಟ್ಟು ಅಂಥ ಸರಿಹೊತ್ತಿನಲ್ಲೇ ಶೆಟ್ಟಳ್ಳಿ ಕೆರೆ ಏರಿ ಮೇಲೆ ಇಳಿಬಿದ್ದು ಮನೆ ಸೇರಿ ಮಲಗಿಕೊಂಡಿದ್ದ. ರಾತ್ರಿ ಹತ್ತು ಮೈಲಿ ನಡೆದು ದಣಿದಿದ್ದರಿಂದ ಬೆಳಗ್ಗೆ ಇಷ್ಟೊತ್ತಾದರೂ ಎದ್ದಿರಲಿಲ್ಲ. ಹೊಸಕೆರೆ ಕಡೆಗೆ ಹೋಗಿ ನೀರು ಮುಟ್ಟಿ ನೆಮ್ಮದಿಯಾಗಿ ಬಂದಿದ್ದ ರಂಗಶ್ಯಾಮಣ್ಣ, ‘‘ಎದ್ದೇಳೊ ತಂಗ್ಳ ಆಗ್ಲೆ ಎಂಟು ಗಂಟೆ ಆಗ್ತಾ ಬಂತು. ವಡೇರಳ್ಳಿಯಿಂದ ಹೆಣ್ಣು ಕಡೇರು ಬೇರೆ ನೋಡೋಕೆ ಬತ್ತಾರಂತೆ, ದೊಡ್ಮನೆ ಕುಂಟ್ಯಾಲ್ ದೊಡ್ಡಯ್ಯ ನಿನ್ನೆ ಎರಡು ಮೂರು ಸಾರಿ ಹೇಳೆವ್ನೆ.’’ ಎಂದು ಎಬ್ಬರಿಸಲು ಕೂಗಿದ್ದ. ಮುದ್ದನುಮಕ್ಕ, ‘‘ಪಾಪ ಹುಡ್ಗ ಸರೊತ್ತಲ್ಲಿ ಬಂದು ಮಲಗೈತೆ. ಇನ್ನೊಂದರ್ಧ ಗಂಟೆ ಮಲುಗ್ಲಿ ಬಿಡು. ಹೆಣ್ಣಿನ ಕಡೇರು ಬರೋದು ಸಂಜೆ ನಾಲ್ಕು ಗಂಟೆಗೆ ಅಂತ ದೊಡ್ಡಯ್ಯ ಹೇಳಿರೋದು. ಒಂದ್ಸೇರು ಬೇಳೆ ಹಾಕಿ ಕರ್ಗಡ್ಬು ಮಾಡ್ತ ಇದ್ದೀನಿ. ನಮ್ಮ ತಂಗ್ಳುಂಗು ಕರ್ಗಡ್ಬಂದ್ರೆ ಪ್ರಾಣ. ಹಂಗೆ ತಗ್ಗಳ್ಳಿ ನಿಮ್ಮ ಬಾಮೈದ್ನುಗು ಹೇಳ್ಬಾ. ಅವುನಾದ್ರೆ ಚನ್ನಾಗಿ ಮಾತಾಡ್ತಾನೆ. ನೀನೊಳ್ಳೆ ಮೂಗ್ಬಸುವುನ್ತರ ಹೇಳಿದ್ದುಕ್ಕೆಲ್ಲ ತಲೆ ಗುಮುಕಾಕ್ತಿಯೇ ಹೊರ್ತು ತುಟಿ ಬಿಚ್ಚಲ್ಲ.’’ ಎಂದು ರಂಗಶ್ಯಾಮಣ್ಣನನ್ನು ತಗುಲಿಕೊಂಡು ನೀರು ತರಲು ಕೇರಿಯ ಬೋರ್ವೆಲ್ ಕಡೆ ನಡೆದಿದ್ದಳು. ಗಂಡ ಹೆಂಡಿರ ಮಾತುಗಳಿಗೆ ತಂಗ್ಳನಿಗೆ ಎಚ್ಚರವಾಗಿತ್ತು. ಎದ್ದವನೇ ಮೈ ಮುರಿದು, ‘‘ಎಲಾ, ಆಗ್ಲೆ ಹುಡುಗ್ರು ಇಸ್ಕೂಲ್ ಕಡೆ ಹೋಗ್ತ ಅವ್ರಲ್ಲ.’’ ಎಂದು ಎದ್ದು ರೊಪ್ಪದ ಕಡೆ ಹೊರಟ. ಅಪ್ಪ ಕಸ ಬಾಚಿ ತಿಪ್ಪೆಗೆ ಹಾಕಿ ಬಂದಿದ್ದರೆ, ಅಮ್ಮ ಹಾಲು ಕರೆದು ಡೈರಿಗೆ ಹಾಕಿ ಬಂದಿದ್ದಳು. ತಂಗ್ಳನಿಲ್ಲದಾಗ ಅವರೆಡೂ ಕೆಲಸಗಳನ್ನು ಇಬ್ಬರೂ ಹಂಚಿಕೊಂಡು ಸಲೀಸಾಗಿ ಮಾಡಿ ಮುಗಿಸುವುದು ದಂಪತಿಗೆ ರೂಢಿಯಾಗಿಬಿಟ್ಟಿದೆ.